ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಆಯುಕ್ತರು/ಪಿ.ಆರ್/ನ|೦ /20-21

ಆಯುಕ್ತರವರ ಕಛೇರಿ
ಕೇಂದ್ರ ಕಛೇರಿ, ಬೆಂಗಳೂರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ: 19/11/2020

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಲಾದ ಟಿಪ್ಪಣಿ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2020-21 ನೇ ಸಾಲಿನಲ್ಲಿ ಕರೆದಿರುವ ಬೀದಿ ದೀಪಗಳ ನಿರ್ವಹಣೆಯ ಟೆಂಡರ್‌ಗಳ ಬಗ್ಗೆ

ಉಲ್ಲೇಖ:
1. BBMP/EE/ELE/MHD/TEND/03/2019-20, Dated: 16-03-2020.
2. BBMP/EE/ELE/YZ/TEND/09/2019-20, Dated: 29-02-2020.
3. BBMP/EE/ELE/DZ/TEND/02/2019-20, Dated: 29-02-2020.
4. BBMP/EE/ELE/E/TEND/06/2019-20, Dated: 29-02-2020.
5. BBMP/EE/ELE/S/TEND/15/2019-20, Dated: 29-02-2020.
6. BBMP/EE/ELE/RRN/TEND/06/2019-20, Dated: 29-02-2020.
7. BBMP/EE/ELE/WEST/TEND/03/2019-20, Dated: 18-3-2020.
8. BBMP/EE/ELE/BH/TEND/02/2019-20, Dated: 11-03-2020.
9. ದಿನಾಂಕ:30-06-2020 ರಂದು ನಡೆದ ಪಾಲಿಕೆಯ ಮಾಸಿಕ ಸಭೆಯ ಸ್ವ-ನಿರ್ಣಯ ಸಂಖ್ಯೆ: 12(100)/2020-21

****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ 2016-17ನೇ ಸಾಲಿನಲ್ಲಿ ಟೆಂಡರ್ ಮುಖೇನ ಗುತ್ತಿಗೆಯನ್ನು ನೀಡಿ ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಸುಮಾರು ಮೂರರಿಂದ ನಾಲ್ಕು ವರ್ಷಗಳ ಕಾಲ ಗುತ್ತಿಗೆ ಕಾಲಾವಧಿಯನ್ನು ವಿಸ್ತರಣೆ ಮಾಡಲಾಗಿತ್ತು. ಪ್ರಸ್ತುತ ಸದರಿ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆ ಅವಧಿಯು ಮುಕ್ತಾಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳಲ್ಲಿ ಉಲ್ಲೇಖ (1) ರಿಂದ (8) ರವರೆಗಿನ ಟೆಂಡರ್ ಅಧಿಸೂಚನೆಗಳಂತೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಈ 8 ವಲಯಗಳ ಹೊಸ ಟೆಂಡರ್‌ಗಳ ಪೈಕಿ ಮಹದೇವಪುರ ವಲಯದ ಟೆಂಡರ್‌ಗಳಿಗೆ ಅನುಮೋದನೆ ದೊರಕಿದ್ದು, ಈಗಾಗಲೇ ಕಾರ್ಯಾದೇಶ ನೀಡಲಾಗಿರುತ್ತದೆ. ಉಳಿದ 7 ವಲಯಗಳ ಟೆಂಡರ್‌ಗಳು ವಿವಿಧ ಹಂತದಲ್ಲಿ ಟೆಂಡರ್ ಅನುಮೋದನೆಗೆ ಸಲ್ಲಿಸಲಾಗಿರುತ್ತದೆ. ವಲಯವಾರು ಪ್ಯಾಕೆಜ್ ವಿವರಗಳು ಈ ಕೆಳಗಿನಂತೆ ಇರುತ್ತದೆ.

Scanned with CamScanner

Sl No	Name of the Zone	No of Wards	No of Packages	Estimated Cost Rs. in lakhs	Quoted Amount Rs. in lakhs	Remarks
1	South	44	24	1226.75	730.00	-
2	East	44	40	1277.57	875.03	-
3	West	44	26	824.58	526.44	-
4	Yelahanka	11	12	491.38	356.32	-
5	Dasarahalli	8	8	232.54	159.16	-
6	Bommanahalli	16	21	648.79	375.74	-
7	Mahadevpura	17	18	746.96	622.06	Already work order issued
8	RR Nagar	14	20	705.39	458.21	-
	TOTAL	198	169	6153.96	4102.96	

ಮೇಲಿನಂತೆ 2020-21ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ ಆಹ್ವಾನಿಸಿದ್ದ ಟೆಂಡರ್‌ಗಳು ಅನುಮೋದನೆಯ ಹಂತದಲ್ಲಿದ್ದ ಸಮಯದಲ್ಲಿ, ದಿನಾಂಕ:30-06-2020 ರಂದು ನಡೆದ ಪಾಲಿಕೆಯ ಮಾಸಿಕ ಸಭೆಯಲ್ಲಿ ಈ ಕೆಳಗಿನಂತೆ ಸ್ವಯಂ ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 198 ವಾರ್ಡ್‌ಗಳಿಗೆ ಹೊಸದಾಗಿ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸುವ ಗ್ಲೋಬಲ್ ಟೆಂಡರ್ ಚಾಲ್ತಿಯಲ್ಲಿ ಇದ್ದು, ಸದರಿ ಸಂಸ್ಥೆರವರು ಎಲ್ಲಾ ವಾರ್ಡ್‌ಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವವರೆಗೆ, ಹೊಸದಾಗಿ ಬೀದಿ ದೀಪಗಳ ನಿರ್ವಹಣೆಗಾಗಿ ಕರೆದಿರುವ ಎಲ್ಲಾ 8 ವಲಯಗಳ ಬೀದಿ ದೀಪಗಳ ನಿರ್ವಹಣೆ ಕಾಮಗಾರಿಯ ಟೆಂಡರ್ ಅನ್ನು ರದ್ದುಗೊಳಿಸಿ, ಹಾಲಿ ನಿರ್ವಹಿಸುತ್ತಿರುವ ಗುತ್ತಿಗೆದಾರರುಗಳಿಂದ ಬೀದಿ ದೀಪಗಳ ನಿರ್ವಹಣೆ ಕಾಮಗಾರಿಯನ್ನು, ಮುಂದುವರೆಸುವುದು ಹಾಗೂ ಹೆಚ್ಚುವರಿಯಾಗಿ ಅಳವಡಿಸಿರುವ ಬೀದಿ ದೀಪಗಳನ್ನು ಗಣನೆಗೆ ತೆಗೆದುಕೊಂಡು ನಿರ್ವಹಣೆ ವೆಚ್ಚವನ್ನು ಪಾವತಿಸಲು ಆಯುಕ್ತರವರು ಕ್ರಮವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು."

. - ಈ ಮೇಲಿನ ಪಾಲಿಕೆ ಸಭೆಯ ಸ್ವ-ನಿರ್ಣಯವನ್ನು ತಮ್ಮ ಅವಗಾಹನೆಗೆ ತರುತ್ತಾ, 2016-17ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆ ಕರಾರಿನ ಬೀದಿ ದೀಪಗಳ ನಿರ್ವಹಣಾ ಟೆಂಡರ್ ದಸ್ತಾವೇಜಿನಂತೆ Section-2 - General conditions of contract clause 25.0 ರಂತೆ "ಗುತ್ತಿಗೆ ಅವಧಿ" ವಿವರವು ಈ ಕೆಳಗಿನಂತೆ ಇರುತ್ತದೆ.

25.0 **Contract period:** The Contractor shall commence the operation and maintenance of street light systems after signing the Contract and issue of work order. The duration of the contract is 12 months from date of award of contract (Work Order) which shall be termed as the contract period. The prices shall be quoted for a period of 12 months period and the same shall be extended only after ascertaining satisfactory performance of the contract. If the performance of the contract is satisfactory, BBMP may extend the contract period by 6 months /12 months if required on the same terms and conditions and approved rates of original Tender. ***However, under any circumstances, the total duration of contract shall not be more than 3 years continuously from the initial contract date. BBMP is the sole authority at its discretion for the extension or otherwise, on completion of each contract period after assessing existing performance of the O& M contract.***

Scanned with CamScanner

ಅದರಂತೆ, 2016–2017ನೇ ಸಾಲಿನಲ್ಲಿ ಟೆಂಡರ್ ಕರೆದು ಯಶಸ್ವಿಯಾದ ಗುತ್ತಿಗೆದಾರರುಗಳಿಗೆ ಸುಮಾರು ಮೂರರಿಂದ ನಾಲ್ಕು ವರ್ಷಗಳ ಕಾಲ ವಿಸ್ತರಣೆ ಮಾಡಿ ಮುಂದುವರೆಸಿದ್ದು, ಪ್ರಸ್ತುತ ಗುತ್ತಿಗೆ ಅವಧಿಯು ಮುಕ್ತಾಯವಾಗಿರುತ್ತದೆ.

ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಂಟು ವಲಯಗಳ ಒಟ್ಟು 198 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಬೀದಿ ದೀಪ ವ್ಯವಸ್ಥೆಯಲ್ಲಿ ಇಂಧನ ದಕ್ಷತೆ ಕ್ರಮಗಳನ್ನು ಅಳವಡಿಸಲು ಪಿಪಿಪಿ ಆಧಾರದ ಮೇಲೆ 10 ವರ್ಷಗಳ ಓ & ಎಮ್ ಮತ್ತು 85.50% ರ ಖಾತರಿ ವಿದ್ಯುತ್ ಉಳಿತಾಯ ಘೋಷಿಸಿರುವ ಹೊರ ಗುತ್ತಿಗೆ ಕಂಪನಿಗೆ ವಹಿಸಲಾಗಿರುತ್ತದೆ. ಸದರಿ ಗ್ಲೋಬಲ್ ಟೆಂಡರ್ ಕಾಮಗಾರಿಯ ಗುತ್ತಿಗೆಯನ್ನು ವಹಿಸಿಕೊಂಡಿರುವ ಸಂಸ್ಥೆಯು 5 ಹಂತದಲ್ಲಿ ಕಾರ್ಯನಿರ್ವಹಿಸಲಿದ್ದು, ಪ್ರತಿ ಹಂತದಲ್ಲಿ ಈಗಾಗಲೇ ಅಳವಡಿಸಿರುವ ಬೀದಿ ದೀಪಗಳನ್ನು ತೆರವುಗೊಳಿಸಿ, ಹೊಸದಾಗಿ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸಬೇಕಿದ್ದು ಗುತ್ತಿಗೆ ಕಾಲಾವಧಿಯು 2.5 ವರ್ಷಗಳಾಗಿರುತ್ತದೆ. ಈ ರೀತಿ ಆಯಾ ವಲಯ/ವಾರ್ಡ್/ಪ್ಯಾಕೆಜ್‌ಗಳ ಹಳೆಯ ಬೀದಿ ದೀಪಗಳನ್ನು ತೆರವುಗೊಳಿಸಿ, ಹೊಸದಾಗಿ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸಿದ ಕೂಡಲೇ ಪ್ರಸ್ತುತ ಕರೆದಿರುವ ಸದರಿ ವಲಯ/ವಾರ್ಡ್/ಪ್ಯಾಕೇಜ್ ವ್ಯಾಪ್ತಿಯ ಟೆಂಡರ್‌ನ ನಿರ್ವಹಣಾ ಗುತ್ತಿಗೆ ಕರಾರನ್ನು ರದ್ದುಗೊಳಿಸುವ ಷರತ್ತು ವಿಧಿಸಲಾಗಿದ್ದು, ಇದರಿಂದ ಗ್ಲೋಬಲ್ ಟೆಂಡರ್ ನಿರ್ವಹಣೆ ಜೊತೆಗೆ ಪುನರಾವರ್ತನೆ ಆಗುವ ಸಂಭವವಿರುವುದಿಲ್ಲ. ಜೊತೆಗೆ ಹೊಸದಾಗಿ ಆಹ್ವಾನಿಸಿರುವ ಬೀದಿ ದೀಪಗಳ ನಿರ್ವಹಣಾ ಟೆಂಡರ್‌ನಲ್ಲಿ ಸರ್ಕಾರದ ಆದೇಶಾನುಸಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರುಗಳಿಗೆ ಶೇ.24.10 ರಷ್ಟು ಕಾಮಗಾರಿಗಳಲ್ಲಿ ಮೀಸಲಾತಿಯನ್ನು ಸಹ ನಿಗಧಿಪಡಿಸಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರುತ್ತಾ, ದಿನಾಂಕ:30–06–2020 ರಂದು ನಡೆದ ಪಾಲಿಕೆಯ ಮಾಸಿಕ ಸಭೆಯಲ್ಲಿ ಕೈಗೊಂಡ ಸ್ವ-ನಿರ್ಣಯವನ್ನು ರದ್ದುಪಡಿಸಲು ಮತ್ತು ಈಗಾಗಲೇ ಹಾಲಿ ಬೀದಿ ದೀಪಗಳ ನಿರ್ವಹಣೆ ಮಾಡುತ್ತಿರುವ ಗುತ್ತಿಗೆ ಅವಧಿಯು ಪೂರ್ಣಗೊಂಡಿರುವುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳಲ್ಲಿ 2020–21ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ ಹೊಸದಾಗಿ ಟೆಂಡರ್ ಆಹ್ವಾನಿಸಿದ್ದು, ಈ ಪೈಕಿ ಮಹದೇವಪುರ ವಲಯದ ಟೆಂಡರ್‌ಗಳಿಗೆ ಈಗಾಗಲೇ ಅನುಮೋದನೆ ದೊರಕಿದ್ದು, ಉಳಿದ 7 ವಲಯಗಳಲ್ಲಿ ಆಹ್ವಾನಿಸಿರುವ ಟೆಂಡರ್‌ಗಳನ್ನು ಅಧಿಕಾರ ಪ್ರತ್ಯಾಯೋಜನೆಯಂತೆ ಅನುಮೋದನೆ ಪಡೆದುಕೊಂಡು ಚಾಲನೆಗೊಳಿಸಲು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಅನುಮೋದನೆಗಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿ.

ಆಯುಕ್ತರು 14/11/2020
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:27–11–2020ರ ನಡವಳಿಗಳು

ವಿಷಯದ ಸಂಖ್ಯೆ: 536/2020–21

ಪ್ರಸ್ತಾವನೆ :

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ 2016–17ನೇ ಸಾಲಿನಲ್ಲಿ ಟೆಂಡರ್ ಮುಖೇನ ಗುತ್ತಿಗೆಯನ್ನು ನೀಡಿ ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಸುಮಾರು ಮೂರರಿಂದ ನಾಲ್ಕು ವರ್ಷಗಳ ಕಾಲ ಗುತ್ತಿಗೆ ಕಾಲಾವಧಿಯನ್ನು ವಿಸ್ತರಣೆ ಮಾಡಲಾಗಿತ್ತು. ಪ್ರಸ್ತುತ ಸದರಿ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆ ಅವಧಿಯು ಮುಕ್ತಾಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2020–21ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳಲ್ಲಿ ಟೆಂಡರ್ ಅಧಿಸೂಚನೆಗಳಂತೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಈ 8 ವಲಯಗಳ ಪೈಕಿ ಮಹದೇವಪುರ ವಲಯದ ಟೆಂಡರ್‌ಗಳಿಗೆ ಅನುಮೋದನೆ ದೊರಕಿದ್ದು, ಈಗಾಗಲೇ ಕಾರ್ಯಾದೇಶ ನೀಡಲಾಗಿರುತ್ತದೆ. ಉಳಿದ 7 ವಲಯಗಳ ಟೆಂಡರ್‌ಗಳು ವಿವಿಧ ಹಂತದಲ್ಲಿ ಟೆಂಡರ್ ಅನುಮೋದನೆಗೆ ಸಲ್ಲಿಸಲಾಗಿದ್ದು, ವಲಯವಾರು ಪ್ಯಾಕೆಜ್ ವಿವರಗಳು ಈ ಕೆಳಗಿನಂತೆ ಇರುತ್ತದೆ.

Sl No	Name of the Zone	No of Wards	No of Packages	Estimated Cost Rs. in lakhs	Quoted Amount Rs. in lakhs	Remarks
1	South	44	24	1226.75	730.00	-
2	East	44	40	1277.57	875.03	-
3	West	44	26	824.58	526.44	-
4	Yelahanka	11	12	491.38	356.32	-
5	Dasarahalli	8	8	232.54	159.16	-
6	Bommanahalli	16	21	648.79	375.74	-
7	Mahadevpura	17	18	746.96	622.06	Already work order issued
8	RR Nagar	14	20	705.39	458.21	-
	TOTAL	198	169	6153.96	4102.96	

Scanned with CamScanner

ಮೇಲಿನಂತೆ 2020-21ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ ಆಹ್ವಾನಿಸಿದ್ದ ಟೆಂಡರ್‌ಗಳು ಅನುಮೋದನೆಯ ಹಂತದಲ್ಲಿದ್ದ ಸಮಯದಲ್ಲಿ, ದಿನಾಂಕ:30-06-2020 ರಂದು ನಡೆದ ಪಾಲಿಕೆಯ ಮಾಸಿಕ ಸಭೆಯಲ್ಲಿ ಈ ಕೆಳಗಿನಂತೆ ಸ್ವಯಂ ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 198 ವಾರ್ಡ್‌ಗಳಿಗೆ ಹೊಸದಾಗಿ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸುವ ಗ್ಲೋಬಲ್ ಟೆಂಡರ್ ಪ್ರಕ್ರಿಯೆಯಲ್ಲಿ ಇದ್ದು, ಸದರಿ ಸಂಸ್ಥೆರವರು ಎಲ್ಲಾ ವಾರ್ಡ್‌ಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವವರೆಗೆ, ಹೊಸದಾಗಿ ಬೀದಿ ದೀಪಗಳ ನಿರ್ವಹಣೆಗಾಗಿ ಕರೆದಿರುವ ಎಲ್ಲಾ 8 ವಲಯಗಳ ಬೀದಿ ದೀಪಗಳ ನಿರ್ವಹಣೆ ಕಾಮಗಾರಿಯ ಟೆಂಡರ್ ಅನ್ನು ರದ್ದುಗೊಳಿಸಿ, ಹಾಲಿ ನಿರ್ವಹಿಸುತ್ತಿರುವ ಗುತ್ತಿಗೆದಾರರುಗಳಿಂದ ಬೀದಿ ದೀಪಗಳ ನಿರ್ವಹಣೆ ಕಾಮಗಾರಿಯನ್ನು ಮುಂದುವರೆಸುವುದು ಹಾಗೂ ಹೆಚ್ಚುವರಿಯಾಗಿ ಅಳವಡಿಸಿರುವ ಬೀದಿ ದೀಪಗಳನ್ನು, ಗಣನೆಗೆ ತೆಗೆದುಕೊಂಡು ನಿರ್ವಹಣೆ ವೆಚ್ಚವನ್ನು ಪಾವತಿಸಲು ಆಯುಕ್ತರವರು ಕ್ರಮವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು."

ಈ ಮೇಲಿನ ಪಾಲಿಕೆ ಸಭೆಯ ಸ್ವ-ನಿರ್ಣಯವನ್ನು ತಮ್ಮ ಅವಗಾಹನೆಗೆ ತರುತ್ತಾ, 2016-17ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆ ಕರಾರಿ ಬೀದಿ ದೀಪಗಳ ನಿರ್ವಹಣಾ ಟೆಂಡರ್ ದಸ್ತಾವೇಜಿನಂತೆ Section-2 - General conditions of contract clause 25.0 ರಂತೆ "ಗುತ್ತಿಗೆ ಅವಧಿ" ವಿವರವು ಈ ಕೆಳಗಿನಂತೆ ಇರುತ್ತದೆ.

25.0 **Contract period:** The Contractor shall commence the operation and maintenance of street light systems after signing the Contract and issue of work order. The duration of the contract is 12 months from date of award of contract (Work Order) which shall be termed as the contract period. The prices shall be quoted for a period of 12 months period and the same shall be extended only after ascertaining satisfactory performance of the contract. If the performance of the contract is satisfactory, BBMP may extend the contract period by 6 months /12 months if required on the same terms and conditions and approved rates of original Tender. ***However, under any circumstances, the total duration of contract shall not be more than 3 years continuously from the initial contract date. BBMP is the sole authority at its discretion for the extension or otherwise, on completion of each contract period after assessing existing performance of the O& M contract.***

ಅದರಂತೆ, 2016-2017ನೇ ಸಾಲಿನಲ್ಲಿ ಟೆಂಡರ್ ಕರೆದು ಯಶಸ್ವಿಯಾದ ಗುತ್ತಿಗೆದಾರರುಗಳಿಗೆ ಸುಮಾರು ಮೂರರಿಂದ ನಾಲ್ಕು ವರ್ಷಗಳ ಕಾಲ ವಿಸ್ತರಣೆ ಮಾಡಿ ಮುಂದುವರೆಸಿದ್ದು, ಪ್ರಸ್ತುತ ಗುತ್ತಿಗೆ ಅವಧಿಯು ಮುಕ್ತಾಯವಾಗಿರುತ್ತದೆ.

Scanned with CamScanner

ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಂಟು ವಲಯಗಳ ಒಟ್ಟು 198 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಬೀದಿ ದೀಪ ವ್ಯವಸ್ಥೆಯಲ್ಲಿ ಇಂಧನ ದಕ್ಷತೆ ಕ್ರಮಗಳನ್ನು ಅಳವಡಿಸಲು ಪಿಪಿಪಿ ಆಧಾರದ ಮೇಲೆ 10 ವರ್ಷಗಳ ಓ & ಎಮ್ ಮತ್ತು 85.50% ರ ಖಾತರಿ ವಿದ್ಯುತ್ ಉಳಿತಾಯ ಘೋಷಿಸಿರುವ ಹೊರ ಗುತ್ತಿಗೆ ಕಂಪನಿಗೆ ವಹಿಸಲಾಗಿರುತ್ತದೆ. ಸದರಿ ಗ್ಲೋಬಲ್ ಟೆಂಡರ್ ಕಾಮಗಾರಿಯ ಗುತ್ತಿಗೆಯನ್ನು ವಹಿಸಿಕೊಂಡಿರುವ ಸಂಸ್ಥೆಯು 5 ಹಂತದಲ್ಲಿ ಕಾರ್ಯನಿರ್ವಹಿಸಲಿದ್ದು, ಪ್ರತಿ ಹಂತದಲ್ಲಿ ಈಗಾಗಲೇ ಅಳವಡಿಸಿರುವ ಬೀದಿ ದೀಪಗಳನ್ನು ತೆರವುಗೊಳಿಸಿ, ಹೊಸದಾಗಿ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸಬೇಕಿದ್ದು ಗುತ್ತಿಗೆ ಕಾಲಾವಧಿಯು 2.5 ವರ್ಷಗಳಾಗಿರುತ್ತದೆ. ಈ ರೀತಿ ಆಯಾ ವಲಯ/ವಾರ್ಡ್/ಪ್ಯಾಕೆಜ್‌ಗಳ ಹಳೆಯ ಬೀದಿ ದೀಪಗಳನ್ನು ತೆರವುಗೊಳಿಸಿ, ಹೊಸದಾಗಿ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸಿದ ಕೂಡಲೇ ಪ್ರಸ್ತುತ ಕರೆದಿರುವ ಟೆಂಡರ್‌ನ ನಿರ್ವಹಣಾ ಗುತ್ತಿಗೆ ಕರಾರನ್ನು ರದ್ದುಗೊಳಿಸುವ ಷರತ್ತು ವಿಧಿಸಲಾಗಿದ್ದು, ಇದರಿಂದ ಗ್ಲೋಬಲ್ ಟೆಂಡರ್ ನಿರ್ವಹಣೆ ಜೊತೆಗೆ ಪುರಾವರ್ತನೆ ಆಗುವ ಸಂಭವವಿರುವುದಿಲ್ಲ. ಜೊತೆಗೆ ಹೊಸದಾಗಿ ಆಹ್ವಾನಿಸಿರುವ ಬೀದಿ ದೀಪಗಳ ನಿರ್ವಹಣಾ ಟೆಂಡರ್‌ನಲ್ಲಿ ಸರ್ಕಾರದ ಆದೇಶಾನುಸಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರುಗಳಿಗೆ ಶೇ.24.10 ರಷ್ಟು ಕಾಮಗಾರಿಗಳಲ್ಲಿ ಮೀಸಲಾತಿಯನ್ನು ಸಹ ನಿಗಧಿಪಡಿಸಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರುತ್ತಾ, ದಿನಾಂಕ:30-06-2020 ರಂದು ನಡೆದ ಪಾಲಿಕೆಯ ಮಾಸಿಕ ಸಭೆಯಲ್ಲಿ ಕೈಗೊಂಡ ಸ್ವ-ನಿರ್ಣಯವನ್ನು ರದ್ದುಪಡಿಸಲು ಮತ್ತು ಈಗಾಗಲೇ ಹಾಲಿ ಬೀದಿ ದೀಪಗಳ ನಿರ್ವಹಣೆ ಮಾಡುತ್ತಿರುವ ಗುತ್ತಿಗೆ ಅವಧಿಯು ಪೂರ್ಣಗೊಂಡಿರುವುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳಲ್ಲಿ 2020-21ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ ಹೊಸದಾಗಿ ಟೆಂಡರ್ ಆಹ್ವಾನಿಸಿದ್ದು, ಈ ಪೈಕಿ ಮಹದೇವಪುರ ವಲಯದ ಟೆಂಡರ್‌ಗಳಿಗೆ ಈಗಾಗಲೇ ಅನುಮೋದನೆ ದೊರಕಿದ್ದು, ಉಳಿದ 7 ವಲಯಗಳಲ್ಲಿ ಆಹ್ವಾನಿಸಿರುವ ಟೆಂಡರ್‌ಗಳನ್ನು ಅಧಿಕಾರ ಪ್ರತ್ಯಾಯೋಜನೆಯಂತೆ ಅನುಮೋದನೆ ಪಡೆದುಕೊಂಡು ಚಾಲನೆಗೊಳಿಸಲು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಅನುಮೋದನೆಗಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19-11-2020 ರ ಟಿಪ್ಪಣಿ.

<u>ತೀರ್ಮಾನ :</u> ಆಯುಕ್ತರವರ ದಿನಾಂಕ:19-11-2020 ರ ಟಿಪ್ಪಣಿಯನ್ನು ಒಪ್ಪಿದೆ.

(ಗೌರವ ಗುಪ್ತ)
ಆಡಳಿತಗಾರರು

Scanned with CamScanner